<u>ಓ.ಎಸ್. ನಂ.377/2012ರಲ್ಲಿ</u>
ಪಿ.ಡಬ್ಲ್ಯೂ-1(ತಿಮ್ಮರಾಜು)

ದಿನಾಂಕ 18-10-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ 1ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಎಸ್ ಆರ್ ವಕೀಲರಿಂದಃ-</u>

ನಾನು ಎಸ್ ಎಸ್ ಎಲ್ ಸಿ ವರೆಗೆ ಕಲಿತಿದ್ದೇನೆ. ವಾದಿ ದಾವೆಯನ್ನು ಏತಕ್ಕೆ ಹಾಕಿದ್ದಾರೆಂದು ಗೊತ್ತಿದೆ. ಮೃತ ವಾದಿ ತಿಮ್ಮಯ್ಯರವರಿಗೆ ಇಬ್ಬರು ಮಕ್ಕಳು. ಅವರುಗಳು ಬೆಂಗಳೂರಿನಲ್ಲಿದ್ದಾರೆ. ಅವರುಗಳ ಆರೋಗ್ಯ ವಾಗಿದ್ದಾರೆಂದರೆ ಸಾಕ್ಷಿ ಅವರು ಕೆಲಸಕ್ಕೆ ಹೋಗುತ್ತಾರೆಂದು ಹೇಳುತ್ತಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ. ಮೃತ ವಾದಿಯ ವಾರಸುದಾರರು ನನಗೆ ಎಸ್ ಪಿಎ ಯಾವ ಉದ್ದೇಶಕ್ಕೆ ಕೊಟ್ಟಿದ್ದಾರೆಂದು ಗೊತ್ತಿದೆ, ಕೇಸನ್ನು ನೋಡಿಕೊಳ್ಳಲು ಕೊಟ್ಟಿದ್ದಾರೆ. ಅವರು ನನಗೆ ಅಧಿಕಾರ ಕೊಟ್ಟಿಲ್ಲ, ನಿಪಿ 1ನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಿಪಿ 1ನ್ನು ಸೃಷ್ಟಿಸಿ ತಂದು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ವಾದಿಯ ಕುಟುಂಬಕ್ಕೆ ಸೇರಿಲ್ಲ ಅಂದರೆ ಸರಿಯಲ್ಲ.

ಮೂಲ ಪುರುಷ ತಿಮ್ಮಯ್ಯರವರಿಗೆ ತಿಮ್ಮಕ್ಕ ಎಂಬ ಹೆಂಡತಿ ಇದ್ದರು ಅಂದರೆ ಸರಿ. ಸದರಿ ತಿಮ್ಮಯ್ಯನ ತಂದೆ ಹೆಸರು ಗೊತ್ತಿಲ್ಲ. ಅವರಿಗೆ ನಾಲ್ಕು ಜನ ಮಕ್ಕಳು. ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆಂದರೆ ಇಲ್ಲ. ಸದರಿ ತಿಮ್ಮಯ್ಯನಿಗೆ ಹೊಂಬಕ್ಕ, ನಿಂಗಮ್ಮ, ಈರಮ್ಮ ಮತ್ತು ಚಿಕ್ಕಹೊಂಬಮ್ಮ ಎಂಬ ನಾಲ್ಕು ಜನ ಹೆಣ್ಣು ಮಕ್ಕಳಿದ್ದಾರೆಂದರೆ ಸಾಕ್ಷಿ ಅವರು ಮೊಮ್ಮಕ್ಕಳು ಎಂದು ನುಡಿಯುತ್ತಾರೆ. ಇವರು ಸಹ ದಾವೆಯಲ್ಲಿ ಪಾಟಿಗಳಾಗಿದ್ದಾರೆ. ತಿಮ್ಮಯ್ಯ ಗಂಡು ಮಕ್ಕಳೆಂದರೆ, ಚಿಕ್ಕೀರಯ್ಯ, ಹೊಂಬಯ್ಯ, ಭದ್ರಯ್ಯ ಮತ್ತು ಈರಯ್ಯ. ವಂಶ ವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ 2ರಲ್ಲಿ ತಿಮ್ಮಯ್ಯನಿಗೆ ಚಿಕ್ಕೀರಯ್ಯ, ಲಕ್ಕಪ್ಪ, ಭದ್ರಯ್ಯ, ಈರಯ್ಯ ಎಂಬ ಮಕ್ಕಳು ಎಂದು ನಮೂದು ಇದೆ ಅಂದರೆ ಸಾಕ್ಷಿ ಲಕ್ಕಪ್ಪರವರನ್ನು ಹೊಂಬಯ್ಯ ಎಂದು

ಸಹ ಕೆರೆಯುತ್ತಾರೆಂದು ನುಡಿಯುತ್ತಾರೆ. ನಿಪಿ 2ರಲ್ಲಿ ಹೊಂಬಯ್ಯ ಎಂದು ನಮೂದಿಸಲು ತೊಂದರೆ ಇರಲಿಲ್ಲ ಅಂದರೆ ಸಾಕ್ಷಿ, ವಂಶ ವೃಕ್ಷದಲ್ಲಿ ಹೊಂಬಯ್ಯ ಇದೆ ಎಂದು ನುಡಿಯುತ್ತಾರೆ. ನಿಪಿ 2 ನ್ನು ನಾನೇ ಹಾಜರುಪಡಿಸಿರುವುದು.

ಮೂಲ ಪುರುಷ ತಿಮ್ಮಯ್ಯನ ಮಕ್ಕಳು 50 ವರ್ಷಗಳಿಂದಲೂ ಬೇರೆ ಬೇರೆ ಗ್ರಾಮದಲ್ಲಿ ವಾಸವಿದ್ದಾರೆಂದರೆ ಸರಿಯಲ್ಲ. ಲಕ್ಕಪ್ಪ ಬನ್ನಿಕುಪ್ಪೆ ಗ್ರಾಮದಲ್ಲಿ ವಾಸವಿದ್ದಾರೆಂದರೆ ಸಾಕ್ಷಿ ಇತ್ತೀಚೆಗೆ 25 ವರ್ಷಗಳಿಂದ ಅಲ್ಲಿ ಇದ್ದಾರೆಂದು ನುಡಿಯುತ್ತಾರೆ, ಅಲ್ಲಿ ಮನೆ ಕಟ್ಟಿಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದರೆ ಸಾಕ್ಷಿ, ಇಲ್ಲ ಎಲ್ಲರೂ ಜೊತೆಯಲ್ಲೇ ಮಾಡುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆಗೆ ಬನ್ನಿಕುಪ್ಪೆ ಗ್ರಾಮದಲ್ಲಿ ಸ.ನಂ.53, 67, 25ರಲ್ಲಿ ಜಮೀನು ಇವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ.ನಂ.67ರಲ್ಲಿ ಮಾತ್ರ 1 ಎಕರೆ 38 ಗುಂಟೆ ಇದೆ ಎಂದು ನುಡಿಯುತ್ತಾರೆ. ಸ.ನಂ.25/6ರಲ್ಲಿ ನನ್ನ ತಂದೆಗೆ 1 ಎಕರೆ 20 ಗುಂಟೆ ಇದೆ ಅಂದರೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಮುತ್ತಯ್ಯ ರವರ ಹೆಸರಿನಲ್ಲಿ ಸ.ನಂ. 163ರಲ್ಲಿ 1 ಎಕರೆ 10 ಗುಂಟೆ ಇದೆ ಅಂದರೆ ಗೊತ್ತಿಲ್ಲ. ಈರಯ್ಯ ಹೆಜ್ಜಾಲ ಗ್ರಾಮದಲ್ಲಿ ವಾಸವೆಂದರೆ ಸರಿ. ಮೃತ ವಾದಿ ತಂದೆ ಭದ್ರಯ್ಯ ರವರು ಬೆಂಗಳೂರಿನಲ್ಲಿ ವಾಸವೆಂದರೆ ಸಾಕ್ಷಿ, ಅವರು ಇಲ್ಲೆ ಇದ್ದರು ಮಕ್ಕಳು ಹೋಗಿದ್ದಾರೆಂದು ನುಡಿಯುತ್ತಾರೆ. ಭದ್ರಯ್ಯರವರು ಜೀವಿತ ಕಾಲದಲ್ಲೆ ಬೆಂಗಳೂರಿನಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದರು ಅಂದರೆ ಸರಿಯಲ್ಲ.

ಚಿಕ್ಕೀರಯ್ಯ ಒಬ್ಬರು ಮಾತ್ರ ಹಿರೇಹಳ್ಳಿಯಲ್ಲಿ ವಾಸವೆಂದರೆ ಸಾಕ್ಷಿ, ಈಗ ಅಲ್ಲಿ ಇರುವುದು ಒಬ್ಬರೇ ಎಂದು ನುಡಿಯುತ್ತಾರೆ. ಮೂಲ ಪುರುಷ ತಿಮ್ಮಯ್ಯರವರಿಗೆ ಒಟ್ಟು ನಾಲ್ಕು ಸರ್ವೆ ನಂಬರ ಆಸ್ತಿಗಳು ಇದ್ದವು. ಮೂಲ ಪುರುಷ ತಿಮ್ಮಯ್ಯನ ಹೆಸರಿನಲ್ಲಿದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಮೂಲ ಪುರುಷ ತಿಮ್ಮಯ್ಯನವರಿಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆ ಹೆಸರಿಗೆ ಖಾತೆ ಇರುವ ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿಲ್ಲ. ನನ್ನ ತಂದೆ ಈ ದಾವೆಯಲ್ಲಿ

ಲಿಖಿತ ತಕರಾರು ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಮೃತ ತಿಮ್ಮಯ್ಯನ ನಾಲ್ಕು ಜನ ಮಕ್ಕಳು ಜೀವಿತ ಕಾಲದಲ್ಲಿ ಭಾಗ ಬೇಕು ಎಂದು ದಾವೆ ಸಲ್ಲಿಸಿಲ್ಲ ಅಂದರೆ ಸಾಕ್ಷಿ ಎಲ್ಲಾ ಜೊತೆಯಲ್ಲಿದ್ದೇವೆಂದು ನುಡಿಯುತ್ತಾರೆ. ಭದ್ರಯ್ಯನಿಗೆ ಚಿಕ್ಕಹೊಂಬಕ್ಕ ಎಂಬ ಮಗಳು ಇದ್ದಾರೆಂದರೆ ಸರಿ. ಅವರು ಈ ದಾವೆಯಲ್ಲಿ ಪಾಟಿ ಅಲ್ಲ. ಮೃತ ಈರಯ್ಯರವರ ಪತ್ನಿ ನಿಂಗಮ್ಮ ತೀರಿಕೊಂಡಿದ್ದಾರೆ. ಮೊದಲೇ ನಿಂಗಮ್ಮ ತೀರಿಕೊಂಡಿದ್ದರು. ನಂತರ ಈರಯ್ಯ ತೀರಿಕೊಂಡರು. ಅವರಿಗೆ ಮೂರು ಜನ ಮಕ್ಕಳು. ಅವರುಗಳೆಂದರೆ, ಆಲಪ್ಪ, ಹೊಂಬಯ್ಯ ಮತ್ತೊಬ್ಬ ಹೆಣ್ಣು ಮಗಳು. ಚಿಕ್ಕೀರಪ್ಪನ ಪತ್ನಿ ಲಕ್ಷ್ಮಮ್ಮ ತೀರಿಕೊಂಡಿದ್ದಾರೆ.

ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.